ಮಾಡಿ ಇಟ್ಟಿದ್ದ ಕುರ್ಚಿಯ ಮೇಲೆ ಹತ್ತಿ ಆಚೆಗೆ ಹಣಕಿದ ಕೂಡಲೇ, ಆ ದುರ್ವಾಸನೆ ಅವನ ಗಂಟಲಿಗಿಳಿದಂತಾಗಿ ಕೂಡಲೇ ಅವನು ಕ್ಯಾಕರಿಸಿ ಉಗುಳುತ್ತಾ ಮೂಗು ಮುಚ್ಚಿಕೊಂಡೇ ಇಳಿದ.

'ನೋಡಿದ್ಯಾ... ಸರಿಯಾಯಿತು ನಿನಗೆ... ನಾವ್ಹೇಗೆ ಇರಬೇಕು ಇಲ್ಲಿ' ಎನ್ನುವಂತೆ ಅವಳು ವಿಜಯದ ನಗೆ ಬೀರಿದಳು. ಅವನು ಸಾವರಿಸಿಕೊಳ್ಳುತ್ತಾ, ನೀರಿನಿಂದ ಬಾಯನ್ನು ಮುಕ್ಕಳಿಸುತ್ತಾ ಮನೆಯೊಳಗೆ ಬಂದು, ತೀರಾ ಸಂತಾಪದ ಧ್ವನಿಯಲ್ಲಿ,

"ನನಗೆ ಗೊತ್ತಾಗ್ಲಿಲ್ಲಾ... ನೀವು ಈಗ ಮಾಡಿದ್ದಕ್ಕಿಂತ ಒಂದು ಗಂಟೆ ಮುಂಚಿತವಾಗಿ ಫೋನ್ ಮಾಡಿದ್ದರೆ ಬಂದು ಕ್ಲೀನ್ ಮಾಡಿಸಿ ಬಿಡ್ತಿದ್ದೆ... ಅದೇನೂ ಅಂತಾ ಸೀರಿಯಸ್ಸಲ್ಲಾ... ನಾಯಿನೋ... ಬೆಕ್ಕೋ... ಸತ್ತಿರಬೇಕು... ಇದೊಂದು ರಾತ್ರೆ. ನೀವು ಅನುಸರಿಸಿಕೊಳ್ಳಿ." ಎಂದು ವಿನಂತಿಸಿಕೊಂಡ.

"ಅಲ್ಲಾ... ಅನುಸರಿಸೋದು ಆಮೇಲಿನ ಮಾತು. ಆ ಸೈಟಿನ ಮುಂಭಾಗದಲ್ಲಿ ಅಷ್ಟು ದೊಡ್ಡ ಮನೆ ಕಳೆದ ವರ್ಷದ ಮಳೇಲಿ ಹಾಗೆ ಹಾಗೆಯೇ ಕುಸಿದು ಹೋಗಿದೆ. ಇದುವರೆಗೂ ನೀನು ತೆಗೆಸಿಲ್ಲ. ತೆಗೆಸಿದ್ದರೆ ಸ್ವಲ್ಪ ಮೆಟೀರಿಯಲ್ ಆದ್ರೂ ಸಿಗೋದು. ಆ ಶೀಟ್‌ಗಳ ರೀಪರ್‌ಗಳು, ಮಣ್ಣಿನ, ಹೆಂಚಿನ ನಡುವೆ ನಾಯಿಯಾದರೂ ಹೇಗೆ ಹೋಗಲು ಸಾಧ್ಯ? ಬೆಕ್ಕೂ ಅಂದರೆ ಒಪ್ಕೋಬಹುದೇನೋ; ಗೋಡೆ ಹಾರಿ ಹೋಗಿದ್ದಿರಬಹುದು..." ಆಕೆ ರಾಗವೆಳೆದಳು.

"ಅದೇನೋ... ಅದೆಲ್ಲಾ ಗೊತ್ತಾಗಬೇಕಾದ್ರೆ... ಬೆಳಗಾಗ್ಲೇ ಬೇಕಲ್ಲಾ... ಬೆಳಗಿನ ನಮಾಜ್ ಆದ ಕೂಡಲೇ ಬಂದು... ಅದನ್ನ ಸರಿಪಡಿಸಿ ಬಿಡ್ತೀನಿ."

"ನಿನ್ನ ಅನುಕೂಲಕ್ಕೆ ತಕ್ಕ ಹಾಗೆ ನಾವು ಬದುಕಬೇಕಲ್ಲಪ್ಪಾ; ನೆರೆಹೊರೆಯವರಿಗೆ ಇಷ್ಟೊಂದು ಹಿಂಸೆ ಮಾಡ್ತೀಯಾಲ್ಲಾ, ಅಲ್ಲಾಹ್‌ಗೆ ಏನು ಉತ್ತರಿಸ್ತೀಯಾ ಖಿಯಾಮತ್‌ನ ದಿನ... ಮತ್ತೆ ಕುಸಿದಿರೋ ಮನೆಯ ಸಮಸ್ತಾನ ತೆಗೆಯದೇ ನೀನಾಗಲೀ, ಅದನ್ನೆತ್ತೋಕೆ ಬರೋ ಜನರಾಗಲೀ ಎಲ್ಲಿಂದ ಹೋಗ್ತೀರಿ ಆ ಕಾಡಿನೊಳಗೆ?"

"ಅದೇ ದೊಡ್ಡ ಸಮಸ್ಯೆ. ನಾನೊಬ್ನೇ ಬಂದು ಇಲ್ಲಿಂದಾನೇ ನಿಮ್ಮ ಮನೆಯಿಂದಾನೇ ಒಂದು ಏಣಿ ಇಟ್ಟು ಹೊಗ್ತೀನಿ. ನಾಯಿನೋ ಬೆಕ್ಕೋ ಇದ್ದರೆ... ನಾನೇ ಎತ್ತಾಕಿ ಬಿಡ್ತೀನಿ. ನೀವೇನೂ ಚಿಂತೆ ಮಾಡ್ಬೇಡಿ."

"ಚಿಂತೆ ಮಾಡೋದಾ... ನಾನ್ಯಾಕೆ ಮಾಡ್ಲಿ... ನೀನ್ ಮಾಡು. ಈವತ್ತು ಇಫ್ತಾರಿ ಆದ ಮೇಲೆ ಒಂದು ಅಗಳು ಅನ್ನ ನನ್ನ ಹೊಟ್ಟೆಗೆ ಹೋಗಿಲ್ಲಾ, ರಾತ್ರೆ ಸೆಹರಿಗೂ ಏನೂ ತಿನ್ನೋಕಾಗಲ್ಲ... ಆ ಹೆಣಾನ ಎತ್ತೋವರ್ಗು ನನ್ ಹೆಣಾ ಬೀಳತ್ತೆ, ಆ ಪುಣ್ಯಾನೂ ನಿಂಗೇ ಆಗುತ್ತೆ ಬಿಡು..."

"ಭಾಬಿ... ಬಿಡ್ತೂ ಅನ್ನಿ. ಒಳ್ಳೆ ಮಾತಾಡಿ. ಹಗಲಿಡೀ ಉಪವಾಸ ಇದ್ದು ಯಾಕೆ ಶಾಪ ಹಾಕ್ತೀರಿ. ಬೇಕಾದ್ರೆ ನನ್ನ ಒದೀರಿ... ಆದ್ರೆ ಇಂಥಾ ಮಾತನಾಡ್ಬೇಡಿ..." ಅವನು ಇನ್ನಷ್ಟು ವಿನೀತನಾದ.

"ನೂರಾರು ಫೋನ್ ಮಾಡಿದ್ರೂ ನಿನ್ ಸೈಟ್‌ನ ಕ್ಲೀನ್ ಮಾಡಲಿಲ್ಲವಲ್ಲಾ. ನನ್ ಸೈಟ್‌ನ ಕ್ಲೀನ್ ಮಾಡು ಅಂದ್ನಾ ನಾನು?"

"ನಿಮ್ ಸೈಟೇ ಅಂತ ತಿಳ್ಕೊಳಿ, ನಾಳೇನೇ ರಿಜಿಸ್ಟರ್ ಮಾಡಿಕೊಡ್ತೀನಿ ನಿಮಗೆ... ಬರೆಸಿಕೊಳ್ಳಿ."

"ನಾನಾ... ಬರೆಸಿಕೊಳ್ಳೋದು?.... ನಂಗ್ಯಾಕೆಬೇಕು... ಮೂಹರ್ತೂ ಬರೀ ಬುರಾ ಜಾನ್ವರ್‌ಗಳದೇ ಅಲ್ಲಿ ಕಾರು ಬಾರು..."

"ಛೇ! ಇಲ್ಲಾ ಬಿಡಿ ಭಾಬಿ... ಅಲ್ಲೇನೂ ಹಂದಿಗಳು ಬರೋಲ್ಲ... ಇನ್ನು ಹೇಳ್ಬೇಕಂದ್ರೆ... ಈ ಮೊಹಲ್ಲಾಗೇ ಕಾಲಿಡೋಲ್ಲ..."

"ಏನಂದೆ... ಏನಂದೆ..."

ಅವಳು ಎಗರಿಬಿದ್ದಳು. "ತುಂಬಿದ ಸಂಜೆ... ರಂಜಾನ್ ತಿಂಗಳಲ್ಲಿ... ನನ್ ಮನೇಲಿ ನಿಂತು... ಆ